ಮುಂತಾದ ಸ್ಥಳಗಳನ್ನೂ ತೋರಿಸಿದ್ದೆ.

'ನಾವೂ ಮಲೆನಾಡಿನಲ್ಲೋ, ಕರಾವಳಿಯಲ್ಲೋ ಹುಟ್ಟಿದ್ದರೆ ಎಷ್ಟು ಚಂದ ಇತ್ತು ಅಲ್ವಾ...' ಎಂದಿದ್ದವಳಿಗೆ, 'ಅಮ್ಮ ಇಲ್ಲಿನವರೆಲ್ಲ ಇಷ್ಟು ಚಂದದ ಪರಿಸರವನ್ನು ಬಿಟ್ಟು ಮುಂಬಯಿ, ಬೆಂಗಳೂರಿನಂಥ ಕಾಂಕ್ರೀಟ್ ಕಾಡುಗಳ ಕಡೆ ಓಡುತ್ತಿದ್ದಾರೆ. ಮನುಷ್ಯನಿಗೆ ಏನು ಕೊರತೆಯಿರುತ್ತದೋ ಅದರ ಮೇಲೆಯೇ ತುಂಬಾ ಗೀಳು' ಎಂದೆ.

'ತತ್ವಜ್ಞಾನಿ ಕಣೊ ನೀನು. ಅಷ್ಟಿಲ್ಲದೆ ನೂರಾರು ಕಥೆಗಳನ್ನು ಬರೆದೆಯಾ ಹೇಳು. ಅಮೆರಿಕದಲ್ಲೋ, ಯೂರೋಪಿನಲ್ಲೋ ಹುಟ್ಟಿ ಇಷ್ಟೊಂದು ಬರೆದಿದ್ದಿದ್ದರೆ ಮ್ಯಾನ್ ಆಫ್ ಮಿಲಿಯನ್ ಡಾಲರ್ ಆಗಿರುತ್ತಿದ್ದೆ' ಎಂದು ತಮಾಷೆ ಹೊಡೆದಿದ್ದಳು. ತಿಂಗಳ ಹಿಂದೆ ಮತ್ತೆ ಗೋಕರ್ಣ, ಸಿರಸಿ ಒಂದು ರೌಂಡ್ ನೋಡೋಣ ಎಂದವಳನ್ನು ಗೋಕರ್ಣ ತೋರಿಸಿಕೊಂಡು ಶಿರಸಿಗೆ ಬಂದು ಸಾಮ್ರಾಟ್ ಹೋಟೆಲ್‌ನಲ್ಲಿ ಉಳಿದು ಬೆಳಿಗ್ಗೆ ಕವಯಿತ್ರಿ ಗೆಳತಿಯೊಬ್ಬಳ ಮನೆಯಲ್ಲಿ ದೋಸೆ ತಿಂದು ಜೋಗದ ಕಡೆ ನಡೆದಿದ್ದೆವು. ರಾತ್ರಿ ಜೋಗದ ಎದುರಿನ ಪ್ರವಾಸಿ ಮಂದಿರದಲ್ಲಿ ಉಳಿದಿದ್ದರಿಂದ ಜಲಪಾತದ ಸದ್ದು ಕಿವಿ ತುಂಬಿಕೊಳ್ಳುತ್ತಿತ್ತು. ಇವಳು ಏನೋ ಥಟ್ಟನೆ ನೆನೆಸಿಕೊಂಡವಳಂತೆ, 'ಅಪ್ಪಾ ಗೊತ್ತಾಯ್ತು ಬಿಡು ನಿನ್ನ ಆ ಕಥೆಯ ನಾಯಕಿ' ಎಂದಿದ್ದಳು. ನಾನು ಅಚ್ಚರಿಯಿಂದ 'ಯಾವ ಕಥೆಯ ನಾಯಕಿ ತಾಯಿ' ಎಂದಿದ್ದೆ. ನನಗೆ ಗೊತ್ತು ಹೆಣ್ಣು ಗಂಡಸಿಗಿಂತಲೂ ಹೆಚ್ಚು ಸೂಕ್ಷ್ಮಮತ್ತು ಹೆಚ್ಚು ಪೊಸೆಸಿವ್‌ನೆಸ್ ಇರೋದು ಹೆಣ್ಣಿನಲ್ಲೇ. 'ನೀನು ಇಲ್ಲಿದ್ದಾಗ ಮಯೂರದಲ್ಲಿ ಹಾರುತ ದೂರ ದೂರ... ಎಂಬ ಕಥೆಯನ್ನು ಬರೆದಿದ್ದೆಯಲ್ಲ ಅವಳೇನಾ ಬೆಳಗಿನ ದೋಸೆ ಸುಂದರಿ' ಎಂದಿದ್ದಳು. 'ನೀನೆ ನನ್ನ ಎಲ್ಲಾ ಕಥೆಗಳ ನಾಯಕಿ ಅಲ್ವಾ' ಎಂದಿದ್ದೆ. 'ಆಹಾ ಬೂಸಿ ಬಿಡಬೇಡ. ನಾನಿರೋದು ಅರವತ್ತು ಕೇಜಿ ತೂಕ. ಅವಳು ನೋಡಿದ್ರೆ ನಲವತ್ತು ಕೇಜಿನೂ ಇಲ್ಲ. ನಾನು ಹಾರಲಿಕ್ಕೆ ಆಗುತ್ತಾ. ಹೋಗಲಿ ಬಿಡು, ಬ್ಯಾಂಕಿನ ಬೆಡಗಿ ನಾಟ್ ಸೋ ಬ್ಯಾಡ್. ಆದರೆ ದೋಸೇದೇ ಪ್ರಾಬ್ಲಮ್ಮು. ಅವಳಿಗೆ ಬೆಂಗಳೂರಿಗೆ ಬರಲಿಕ್ಕೆ ಹೇಳು. ಚಂದದ ದೋಸೆ ಮಾಡೋದನ್ನ ಕಲಿಸ್ತೀನಿ ಅಂದಗಾತಿಗೆ. ಸಾಲದು ಅಂಥ ಮನೆಗೆ ಬೆಳದಿಂಗಳು ಅಂಥ ಬೇರೆ ಹೆಸರು ಇಟ್ಟುಕೊಂಡಿದ್ದಾಳೆ. ಅದು ನಮ್ಮ ಮನೆಯ ಹೆಸರು ಅಲ್ವಾ. ಹೋಗಲಿ ಬಿಡು ನನ್ನನ್ನು ಕಾಪಿ ಮಾಡಿದ್ದಾಳೆ. ಅಂದಹಾಗೆ ಬರಿ ಕಥೆ, ಫ್ರೆಂಡ್‌ಶಿಪ್ ಮಾತ್ರಾನೋ ಇಲ್ಲಾ...' ಎಂದವಳಿಗೆ 'ಚಂದ್ರಮ...' ಎಂದು ತುಸು ಕೋಪ ತೋರಿಸಿದ್ದೆ.

'ಓಕೆ ಓಕೆ ನಂಗೊತ್ತು ನೀನು ಪುಕ್ಕಲ ಆಸಾಮಿ ಅಂಥ. ನಿನ್ನ ಟೇಸ್ಟ್ ಮಾತ್ರ ಯಾವಾಗಲೂ ಸೂಪರ್...' ಎಂದು ನನ್ನ ಸುಮಾರು ಹದಿನೈದಿಪ್ಪತ್ತು ಕಥೆಗಳ ಹೆಸರುಗಳನ್ನು ಹೇಳುತ್ತಲೇ ನಿದ್ದೆಗೆ ಜಾರಿದ್ದಳು.

ತಿಂಗಳ ಹಿಂದಿನ ಘಟನೆಯ ನೆನಪುಗಳನ್ನು ಕಳಚಿಟ್ಟು ನಾನು ಕ್ಷಣಮಾತ್ರದಲ್ಲಿ ಆಸ್ಪತ್ರೆಯ ಐಸಿಯುವಿನ ನಂಬರ್ ಓನ್ ಬೆಡ್ ಮುಂದೆ ನಿಂತಿದ್ದೆ. ಆ ಬೆಡ್‌ನ್ನು ಡಾಕ್ಟರುಗಳು ಸುತ್ತುವರಿದಿದ್ದರು. ಇವಳಿಗೆ ವೆಂಟಿಲೇಟರ್ ತಗುಲಿಸಿದ್ದರು. ಆಸ್ಪತ್ರೆಯ ಸೀನಿಯರ್ ಕಾರ್ಡಿಯಾಕ್ ಸರ್ಜನ್ ಡಾಕ್ಟರ್ ವಿಕ್ರಮ್ ಕೂಡಾ ಅಲ್ಲಿದ್ದರು. ಇವಳನ್ನು ಈ ಆಸ್ಪತ್ರೆಗೆ ಸೇರಿಸಲು ಅವರೇ ಶಿಫಾರಸು ಮಾಡಿದ್ದಿದ್ದು. ನನ್ನ ಕೈಹಿಡಿದು, 'ಡೋಂಟ್ ಲೂಸ್ ಹಾರ್ಟ್ ಸರ್. ಮೇಡಮ್‌ಗೆ ಎರಡನೇ ಸಾರಿ ಮೂರು ನಿಮಿಷ ಕಾರ್ಡಿಯಾಕ್ ಅರೆಸ್ಟ್ ಆಗಿದೆ. ಇಮ್ಮಿಡಿಯಟ್ಟಾಗಿ ನಾವು ಸಿಪಿಆರ್ ಮಾಡಿದ್ದೇವೆ. ಅಲ್ಲದೆ ಆಟೋಮೇಟೆಡ್ ಎಕ್ಸ್‌ಟರ್ನಲ್ ಡಿಫಿಬ್ರಿಲ್ಲೇಟರ್ ಕೂಡಾ ಯೂಸ್ ಮಾಡಿದ್ದೇವೆ. ಇಡೀ ಬೆಂಗಳೂರಿನ ಮಲ್ಟಿಸ್ಪೆಷಾಲಿಟಿ ಹಾಸ್ಪಿಟಲ್‌ಗಳಲ್ಲಿ ಈ ಯಂತ್ರವನ್ನು ಮೊದಲು ಅಳವಡಿಸಿದ್ದು ನಮ್ಮ ಹಾಸ್ಪಿಟಲ್‌ನಲ್ಲಿಯೇ. ಕಾರ್ಡಿಯಾಕ್ ಅರೆಸ್ಟ್ ಆದ ಸಮಯದಲ್ಲಿ ಬ್ರೈನ್‌ಗೆ ಬ್ಲಡ್ ಫ್ಲೋ ಆಗೋದು ನಿಂತು ಬಿಡ್ತದೆ. ಆಗ ಸಡನ್ ಆಗಿ ಪ್ರಜ್ಞೆ ಹೋಗ್ತದೆ. ವೆಂಟಿಲೇಟರ್‌ನಲ್ಲಿ ಇಟ್ಟಿದ್ದೀವಿ. ಶಿ ಈಸ್ ರೆಸ್ಪಾಂಡಿಗ್ ವೆಲ್. ದೇಹ ಆಕ್ಸಿಜನ್ ತಗೋತಾ ಇದೆ. ಆದರೆ ಪ್ರಜ್ಞೆ ಇವೊತ್ತು ಬರಬಹುದು ನಾಳೆ ಬರಬಹುದು. ಇನ್ನೊಂದು ವಾರಕ್ಕೆ ಬರಬಹುದು... ಹೇಳಲಿಕ್ಕೆ ಬಾರದು. ಕಮ್ ಬ್ಯಾಕ್ ಮಾಡೊ ಛಲ ಅವರ ದೇಹದಲ್ಲೇ ಹುಟ್ಟಬೇಕು. ನಾಳೆ ಬೆಳಿಗ್ಗೆ ಎಂಆರ್‌ಐ ಸ್ಕ್ಯಾನ್ ಮಾಡಿಸೋಣ. ಬ್ರೈನ್‌ನ ಕ್ಲಿಯರ್ ಪಿಕ್ಚರ್ ಸಿಗಬಹುದು. ನಾಳೆ ಮಧ್ಯಾಹ್ನ ತಜ್ಞ ನ್ಯೂರೊಲಜಿಸ್ಟ್ ಬರ್ತಿದಾರೆ. ಅವರ ಅಭಿಪ್ರಾಯ ಮುಖ್ಯ. ಬೇರೆಲ್ಲ ನಮ್ಮ ಡಾಕ್ಟರ್ಸ್ ಮತ್ತು ನರ್ಸ್‌ಗಳು ನೋಡ್ಕೊತಾರೆ. ಲೆಟ್ಸ್ ಹೋಪ್ ಫಾರ್ ದಿ ಬೆಸ್ಟ್' ಎಂದು ಧೈರ್ಯ ತುಂಬಿ

